


ಗಾಬರಿಯಿಂದ ಕಕ್ಕಾಬಿಕ್ಕಿಯಾದಳು. ಒಳಗೆ ಬಂದ ರಂಗಮ್ಮ, ಅವರನ್ನು ಕರೆದು ಕೇಳಿದಳು. 'ಅತ್ತೆ, ಅಡಿಗೆ ಆಯ್ತು, ಬಡಿಸಿ ಆಯ್ತು, ಎಲೆ ಬಿಸಾಕಿ ನೆಲ ಶುದ್ಧಿ ಮಾಡಿ ಆಯ್ತು' ಅಂದರು ಸೊಸೆಯರು. ಸೊಸೆಯರ ಮಾತು ಕೇಳಿ ರಂಗಮ್ಮ ತಲೆ ಚಚ್ಚಿಕೊಂಡಳು. ನಡೆದ ಕತೆಯನ್ನೆಲ್ಲಾ ತನ್ನ ತಂಗಿಗೆ ಹೇಳಿಕೊಂಡು ಅತ್ತಳು. ಸಿಂಗಮ್ಮನಿಗೆ ಸಂಕಟವಾಯಿತು.

ಮಾರನೇ ದಿನ ಅವಳು ಸೊಸೆಯರನ್ನು ಕರೆದು, 'ನೋಡ್ರಮ್ಮಾ, ನಿಮ್ಮತ್ತೆ ಮಾವ ಒಂದಷ್ಟು ದಿನ ನಮ್ಮ ಊರಿಗೆ ಬರುತ್ತಿದ್ದಾರೆ. ನಿಮ್ಮ ಮನೆ, ನಿಮ್ಮದೇ ಜವಾಬ್ದಾರಿ' ಎಂದು ಹೇಳಿದಳು.

ಮಾರನೇ ದಿನ ಸೊಸೆಯರು ವಿಧಿಯಿಲ್ಲದೇ ಕೆಲಸ ಮಾಡತೊಡಗಿದರು. ಅಡಿಗೆ ಕೆಲಸ, ಅಂಗಳ ಗುಡಿಸುವುದು, ಹಾಲು ಕರೆಯುವುದು, ತರಕಾರಿ, ದಿನಸಿ ತರುವುದು ಎಲ್ಲಾ ಕೆಲಸ ಮಾಡಿಕೊಂಡರು. ತಾವೀಗ ಆರು ಜನ ಮಾಡುತ್ತಿರುವ ಕೆಲಸಗಳನ್ನು ಅತ್ತೆ ಒಬ್ಬರೆ ಮಾಡುತ್ತಿದ್ದರಲ್ಲ ಅನಿಸಿತು. ಹಾಗೂ ಹೀಗೂ ಒಂದು ವಾರ ಕಳೆಯುವ ಹೊತ್ತಿಗೆ ಸಾಕು ಸಾಕಾಯ್ತು. ಒಬ್ಬಳಿಗೆ ಕೈಕಾಲು ನೋವು, ಇನ್ನೊಬ್ಬಳಿಗೆ ತಲೆ ನೋವು, ಮತ್ತೊಬ್ಬಳಿಗೆ ಜ್ವರ ಅಂತ ನರಳತೊಡಗಿದರು. ಕೊನೆಗೆ ಸಿಂಗಮ್ಮನ ಮನೆಗೆ ಹೋಗಿ ಕಷ್ಟ ಹೇಳಿಕೊಂಡು ಅತ್ತೆಯನ್ನು ಕರೆದರು.

ರಂಗಮ್ಮನಿಗೆ ಸೊಸೆಯರ ಪರಿಸ್ಥಿತಿ ಕಂಡು ದುಃಖವಾಯ್ತು. ಸಿಂಗಮ್ಮ ಸೊಸೆಯರನ್ನು ಕುರಿತು, 'ನಿಮ್ಮತ್ತೆಯನ್ನು ಕರೆದುಕೊಂಡು ಹೋಗಿ, ಆದರೆ ಅವಳು ಹೇಳುವ ಕೆಲಸಗಳನ್ನು ಮಾಡಿ. ಅವಳಿಗೂ ಸಹಾಯವಾಗುತ್ತದೆ ನಿಮಗೂ ಕೆಲಸ ಬರುತ್ತದೆ. ಹಂಚಿಕೊಂಡು ಕೆಲಸ ಮಾಡಿದರೆ ಯಾರಿಗೂ ಕಷ್ಟವಾಗುವುದಿಲ್ಲ" ಎಂದು ಬುದ್ಧಿವಾದ ಹೇಳಿ ಕಳಿಸಿದಳು. ಮನೆಗೆ ಹಿಂತಿರುಗಿದ ನಂತರ ಅತ್ತೆ ಹೇಳುವ ಕೆಲಸಗಳನ್ನು ಸೊಸೆಯರು ಮುತುವರ್ಜಿಯಿಂದ ಮಾಡತೊಡಗಿದರು. ●